ಅ) ರಾಜ್ಯದ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಇರುವ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು;

ಆ) ವಯಸ್ಕರ ಶಿಕ್ಷಣಕ್ಕಾಗಿ ವರ್ಷ ಒಂದಕ್ಕೆ ಖರ್ಚು ಮಾಡುತ್ತಿರುವ ಹಣವೆಷ್ಟು;

ಇ) ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು ?

ಶ್ರೀ ಪ್ರಭಾಕರ ಎಸ್. ತಾಣೆ (ವಯಸ್ಕರ ಶಿಕ್ಷಣ ಸಚಿವರು):-

ಅ) 150

ಆ) 1991-92ನೇ ಸಾಲಿನಲ್ಲಿ ಒಟ್ಟಾರೆ ರೂ. 1192.09 ಲಕ್ಷ ಖರ್ಚು ಮಾಡಲಾಗಿದೆ.

ಇ) ರೂ. 816.63 ಲಕ್ಷಗಳು

ದಕ್ಷಿಣ ಕನ್ನಡ ಜಿಲ್ಲೆಯ ರಂಪಣಿ ಬಲೆ

312 (689) ಶ್ರೀ ಕೆ. ಸೋಮಪ್ಪ ಸುವರ್ಣ, (ಮೂಲ್ಕಿ-ಮೂಡಬಿದರೆ):-

ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಡಿಕೆಯಲ್ಲದ್ದ ಬಲೆಯಲ್ಲಿ ಮೀನು ಹಿಡಿಯುವ ದೋಣಿ ಬಲೆಗಳು ಎಷ್ಟು ಅಸ್ತಿತ್ವದಲ್ಲಿದೆ;

ಆ) ಈಗ ರಂಪಣಿಯಲ್ಲಿ ಮೀನು ಹಿಡಿಯುವಿಕೆಯಲ್ಲಿ ಲಾಭದಾಯಕವಾಗಿರುವುದೇ;

ಇ) ಸರ್ಕಾರದ ಯಾವ ಸಹಾಯವನ್ನು ಪಡೆಯದೇ ಕಾರ್ಯಾಚರಿಸುತ್ತಿರುವ ಈ ರಂಪಣಿ ಪಂಡಿನವರಿಗೆ ಸರ್ಕಾರದ ಸಹಾಯ ಧನ ಕೊಡುವ ಆಲೋಚನೆ ಇದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):-

ಅ) ಒಂದು ರಂಪಣಿ ಫಂಡ್ ಮೀನುಗಾರಿಕೆ (ರಂಪಣಿ ಬಲೆ) ಘಟಕವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದೆ.

ಆ) ಇಲ್ಲ.

ಇ) ಇಲ್ಲ.

ವೀರಾಜಪೇಟೆ ತಾಲ್ಲೂಕಿನಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿರುವ ಹುದ್ದೆಗಳ ಭರ್ತಿ

314 (690) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):-

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೀರಾಜಪೇಟೆ ತಾಲ್ಲೂಕಿನ ಪಶು ಸಂಗೋಪನಾ ಇಲಾಖೆಯಲ್ಲಿ ಸೂಪರ್‌ವೈಸರ್ಸ್, ವೆಟರ್ನರಿ ಇನ್ಸ್‌ಪೆಕ್ಟರ್ಸ್, ವೆಟರ್ನರಿ ಸಹಾಯಕರು, ದಲಾಯಿತರುಗಳ ಹುದ್ದೆ ಎಷ್ಟು ಖಾಲಿ ಇವೆ;

ಆ) ಹುದ್ದೆಗಳು ಭರ್ತಿಯಾಗದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):-

ಅ) ಹುದ್ದೆ

ಸೂಪರ್ ವೈಸರ್ಸ್	1
ಹಿರಿಯ ಪಶು ವೈದ್ಯಕೀಯ ಪರೀಕ್ಷಕರು	2
ಪಶು ವೈದ್ಯಕೀಯ ಪರೀಕ್ಷಕರು	12
ಪಶು ವೈದ್ಯಕೀಯ ಸಹಾಯಕರು	10
ದಲಾಯಿತರು	6

ಆ) ಬಂದಿದೆ

ಇ) ಸೂಪರ್‌ವೈಸರ್ ಹುದ್ದೆಯನ್ನು ಹಿರಿಯ ಪಶು ವೈದ್ಯಕೀಯ ಪರೀಕ್ಷಕರಿಗೆ ಮುಂಬಡ್ತಿ ನೀಡಿದಾಗ ಭರ್ತಿ ಮಾಡಲಾಗುತ್ತದೆ ಮತ್ತು ತರಬೇತಿ ಪಡೆದ 119 ಪಶು ವೈದ್ಯಕೀಯ ಪರೀಕ್ಷಕರ ಹಾಗೂ 236 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. 400 'ಡಿ'' ದರ್ಜೆ ನೌಕರರ ಹುದ್ದೆಗಳನ್ನು ತುಂಬಲು ಸರ್ಕಾರದ ಅನುಮತಿಯ ಮೇರೆಗೆ ಜಿಲ್ಲಾ ಉಪ ನಿರ್ದೇಶಕರುಗಳಿಗೆ ನೇಮಕಾತಿ ಮಾಡಲು ಸೂಚಿಸಲಾಗಿದೆ.

ರಾಜ್ಯದಲ್ಲಿರುವ ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಮತ್ತು ಶಿಕ್ಷಕರೇತರ ಹುದ್ದೆಗಳ ಭರ್ತಿ

316 (856) ಶ್ರೀ ಶಿವಾನಂದ್ ಎಚ್. ಕೌಜಲಗಿ (ಬೈಲಹೊಂಗಲ):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಮತ್ತು ಶಿಕ್ಷಕರೇತರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮವೇನು ಹಾಗೂ ಯಾವಾಗ ತುಂಬಲಾಗುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಶಿಕ್ಷಕರ ಮತ್ತು ಶಿಕ್ಷಕರೇತರ ಹುದ್ದೆಗಳೆಷ್ಟು, ಸದರಿ ಹುದ್ದೆಗಳನ್ನು ಮಂಜೂರು ಮಾಡುವುದು ಹಾಗೂ ಭರ್ತಿ ಮಾಡುವುದು ಯಾವಾಗ (ವಿವರ ನೀಡುವುದು);

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ವಣ್ಣೂರ ತುರ್ಕರ ಶೀಗೀಹಳ್ಳಿ ಹಾಗೂ ಒಕ್ಕುಂದ ಮತ್ತು ಸವದತ್ತಿ ತಾಲ್ಲೂಕು ಪೈಕಿ ಸುತಗಟ್ಟಲ್ಲಿ ಸರಕಾರಿ ಪ್ರೌಢಶಾಲೆಗಳು ಪ್ರಾರಂಭವಾಗಿದ್ದರೂ ಹುದ್ದೆಗಳು ಮಂಜೂರಾಗದಿರುವುದರಿಂದ ಎರವಲು ಸೇವೆ ಮೇಲೆ ಶಿಕ್ಷಕರನ್ನು ನೇಮಿಸಲಾಗುತ್ತಿರುವುದು ನಿಜವೆ ?

ಉ) ಹಾಗಿದ್ದಲ್ಲಿ ಹುದ್ದೆಗಳನ್ನು ಮಂಜೂರು ಮಾಡಿ ಖಾಯಂ ಭರ್ತಿ ಮಾಡುವುದು ಯಾವಾಗ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-